**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಓ ಎಸ್ 83/2021**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ದಿನಾಂಕಃ 08-12-2025** **ಡಿ ಡಬ್ಲ್ಯೂ 1**

**ಪಾಟೀ ಸವಾಲುಃ** ವಾದಿ ಪರ ಶ್ರೀ ಎಂ ಆರ್ ಎಂ ಹೆಚ್ ವಕೀಲರಿಂದಃ

ವಾದಿಯರು ನನ್ನ ಅಣ್ಣನ ಮಕ್ಕಳು. ವಾದಿಯರನ್ನು ಹೊರತುಪಡಿಸಿ ನನ್ನ ಅಣ್ಣ ರಾಮಪ್ಪನಿಗೆ ಬೇರೆ ಯಾರೂ ಮಕ್ಕಳು ಇಲ್ಲ ಎಂದರೆ ಸರಿ. ನಾನು ಮತ್ತು ನನ್ನ ಅಣ್ಣ ತಮ್ಮಂದಿರು ಬೇರೆಯಾಗಿ ಸುಮಾರು 18 ವರ್ಷಗಳಾಯಿತು. ವಾದಿಯರು ಈ ದಾವೆಯಲ್ಲಿ ಏನು ಪರಿಹಾರ ಕೇಳಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ದಾವಾ ಆಸ್ತಿಗಳು ವಾದಿಯರ ತಂದೆ ರಾಮಪ್ಪನ ಹಿಸ್ಸೆಗೆ ಬಂದ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ. ದಿಃ 06.07.2002 ರಂದು ನನ್ನ ಹಾಗೂ ನನ್ನ ಅಣ್ಣ ತಮ್ಮಂದಿರ ನಡುವೆ ಜುಬಾನಿ ಪಾಲು ವಿಭಾಗ ಆಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ.1 ನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿ ಇರುವುದಾಗಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಸಹಿಯನ್ನು **ಮುಖಾಬಿಲೆಯಾಗಿ ನಿಪಿ.1(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಸದರಿ ದಾಖಲೆಯನ್ನು ಅವರೇ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ವಾಸವಾಗಿರುವ ಮನೆಯ ನಂಬರ್ ನನಗೆ ಗೊತ್ತಿಲ್ಲ. ನಿಮ್ಮ ಮನೆ ಎಷ್ಟು ಅಡಿ ಉದ್ದ ಮತ್ತು ಅಗಲ ಇದೆ ಎಂದರೆ ಸಾಕ್ಷಿಯು ನಾನು ಅಳತೆ ಮಾಡಿಲ್ಲ ಎಂದು ನುಡಿಯುತ್ತಾರೆ. ನಾನು ವಾಸವಾಗಿರುವ ಮನೆಯ ಪೂರ್ವ ದಿಕ್ಕಿಗೆ ನನ್ನ ಅಣ್ಣ ರಾಮಪ್ಪನ ಮನೆ ಇದೆ. ಪಶ್ಚಿಮಕ್ಕೆ ನನ್ನ ತಮ್ಮ ಮಂಜಪ್ಪನ ಮನೆ, ಉತ್ತರಕ್ಕೆ ಜಯಪ್ಪನ ಅಣ್ಣನ ಮಕ್ಕಳ ಮನೆ ಮತ್ತು ದಕ್ಷಿಣಕ್ಕೆ ಓಡಾಡಲು ಬಿಟ್ಟಿರುವ ಜಾಗೆ ಇದೆ. ಸದರಿ ಮನೆಯಲ್ಲಿ ನಾನು ಹುಟ್ಟಿದಾಗಿನಿಂದಲೂ ಅಲ್ಲಿಯೇ ವಾಸವಾಗಿದ್ದೇನೆ. ಸದರಿ ಮನೆ ನನ್ನ ತಂದೆ ಕರಿಬಸಪ್ಪ ಅವರ ಜೀವಿತ ಕಾಲದಲ್ಲಿ ಕಟ್ಟಿದ್ದ ಮನೆ ಎಂದರೆ ಸರಿ. ನಾನು ಹಾಗೂ ನನ್ನ ಅಣ್ಣ ತಮ್ಮಂದಿರು ಬೇರೆಯಾಗುವ ಪೂರ್ವದಲ್ಲಿ ಅದೇ ಜಾಗೆಯಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ಬೇರೆಯಾಗುವ ಸಂದರ್ಭದಲ್ಲಿ ಪಾಲು ವಿಭಾಗ ಮಾಡುತ್ತೇವೆ ಎಂದು ಪತ್ರಕ್ಕೆ ನನ್ನ ಸಹಿ ಪಡೆದಿದ್ದರು ಆದರೆ ಏನು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ವಾಸಿಸುತ್ತಿರುವ ಮನೆ ಯಾರ ಹೆಸರಿಗೆ ಇದೆ ಎಂದು ನನಗೆ ಗೊತ್ತಿಲ್ಲ. ನಾನು ವಾಸಿಸುವ ಮನೆಗೆ ಕಂದಾಯ ಕಟ್ಟುತ್ತೇನೆ. ನನ್ನ ಅಣ್ಣ ತಮ್ಮಂದಿರು ಅವರವರ ಹಿಸ್ಸೆ ಪ್ರಕಾರ ಆಸ್ತಿಗಳ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿ. ವಾದಿಯರು ಅವರ ತಂದೆ ಹಿಸ್ಸೆಯನ್ನು ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ವಾದಿಯರು ತಮ್ಮ ತಂದೆಯ ಆಸ್ತಿಯಲ್ಲಿ ಹಿಸ್ಸೆ ಪಡೆದುಕೊಳ್ಳಲು ನನ್ನದು ತಕರಾರು ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದರೆ ಪಾಲು ಜುಬಾನಿ ಪಾಲು ವಿಭಾಗ ಪತ್ರವನ್ನು ನನ್ನ ಉಳಿದ ಅಣ್ಣ ತಮ್ಮಂದಿರು ಮಿಲಾಪೆಯಾಗಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈ ರೀತಿ ಜುಬಾನಿ ಪಾಲು ವಿಭಾಗವನ್ನು ಮಿಲಾಪೆಯಾಗಿ ಮಾಡಿಕೊಂಡಿರುತ್ತಾರೆ ಎಂದು ನಾನು ದಾವೆ ಸಲ್ಲಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಿಳಿದ ನಂತರ ನಾನು ಇದೇ ದಾವೆಯಲ್ಲಿ ಅದಕ್ಕೆ ತಕರಾರು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

ನನಗೆ ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ನನ್ನ ಮನೆಯ ಪೂರ್ವ ದಿಕ್ಕಿನ ರಾಮಪ್ಪನವರ ಹಿಸ್ಸೆಯ ಆಸ್ತಿಯಲ್ಲಿ ಮನೆ ಕಟ್ಟಲು ಅವರ ಹೆಂಡತಿಗೆ ರಾಜೀವ್ ಅವಾಸ್ ಯೋಜನೆಯಡಿ ಹಣ ಮಂಜೂರಾಗಿ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರಕ್ಕೆ ಸಂಬಂದಿಸಿದಂತೆ ವಾದಿಯರು ಸಂಬಂದಪಟ್ಟ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಯರು ಸಲ್ಲಿಸಿದ ದಾಖಲೆಗಳ ಬಗ್ಗೆ ನಾನು ತಿಳಿದುಕೊಂಡಿಲ್ಲ. ನನ್ನ ಅಣ್ಣ ರಾಮಪ್ಪ ಹಾಗೂ ಅವರ ಮಕ್ಕಳಾದ ವಾದಿಯರ ನಡುವೆ ಹೊಂದಾಣಿಕೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಹಾಗೂ ನನ್ನ ಉಳಿದ ಅಣ್ಣ ತಮ್ಮಂದಿರ ಸಂಬಂಧ ಚೆನ್ನಾಗಿದೆ ಎಂದರೆ ಸರಿಯಲ್ಲ. ವಾದಿಯರು ಹಾಗೂ ವಾದಿಯರ ತಾಯಿ ರಾಮಪ್ಪನವರ ಹಿಸ್ಸೆಯ ಜಾಗದಲ್ಲಿ ಮನೆ ಕಟ್ಟಲು ಪ್ರಯತ್ನಿಸಿದಾಗ ನಾನು ಹಾಗೂ ನನ್ನ ಸಹೋದರರು ವಾದಿಯರನ್ನು ತಡೆದಿರುತ್ತೇವೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ವಾದಿ ಊರ ಹಿರಿಯರ ಮುಂದೆ ಪಂಚಾಯ್ತಿ ಮಾಡಿಸಿದ್ದರು ಎಂದರೆ ಸರಿಯಲ್ಲ. ಈ ರೀತಿ ಪಂಚಾಯ್ತಿ ನಡೆದಿದ್ದರೂ ಸಹ ನನ್ನ ಸಹೋದರನ ಬೆಂಬಲದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರಾಮಪ್ಪನ ಹಿಸ್ಸೆಗೆ ಬಂದ ಆಸ್ತಿಗಳು ಆತನ ಹೆಸರಿಗೆ ಇವೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಕರಾರಿನಲ್ಲಿ ಬರೆಸಿರುವ ಅಂಶಗಳ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಕರಾರಿನಲ್ಲಿ ಸಲ್ಲಿಸಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ವಾದಿಯರಿಗೆ ಹಿಸ್ಸೆ ಕೊಡಬಾರದು ಎಂಬ ಉದ್ದೇಶದಿಂದ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಗೆ ಅವರ ಹಿಸ್ಸೆ ಕೊಡಬಾರದು ಎಂಬುದು ನನ್ನ ಉದ್ದೇಶ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ .**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ಹರಿಹರ